ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹುಣಸೂರು

**ಸಿ.ಸಿ. 1326/2019**

**ಸಿ.ಡಬ್ಲ್ಯೂ -1 ಪಿ.ಡಬ್ಲ್ಯೂ -2**

ದಿಃ **25-07-2022** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿಯ ಹೆಸರು | ವೆಂಕಟೇಶ ರೆಡ್ಡಿ |
| ತಂದೆಯ ಹೆಸರು | ವೆಂಕಟಪ್ಪ ರೆಡ್ಡಿ |
| ವಯಸ್ಸು | ಸುಮಾರು 52 ವರ್ಷ |
| ಕೆಲಸ | ವ್ಯವಸಾಯ |
| ವಾಸಸ್ಥಳ | ರೆಡ್ಡಿಕೊಪ್ಪಲು ಗ್ರಾಮ |

**ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ಚಾಸಾ 1 ನನ್ನ ತಮ್ಮ , ಆರೋಪಿ 1 ರಿಂದದ 4 ನನ್ನ ಸಂಬಂಧಿಕರು. 2019 ರ ಏಪ್ರಿಲ್ ತಿಂಗಳಿನಲ್ಲಿ ಉದ್ದೂರೂ ಗ್ರಾಮದ ಸರ್ವೆ ನಂಬರ್ 42/ ಪಿ6 ರಲ್ಲಿ 1 ನೇ ಆರೋಪಿ ಕಲ್ಲುಕಂಬ ನೆಡುತ್ತಿದ್ದನು. ಆಗ ನಾನು ದುರಸ್ತು ಆಗಿಲ್ಲ ಕಲ್ಲುಕಂಬ ನೆಡಬೇಡ ಅಂತಾ ಕೇಳದೆ . ಆಗ 1 ನೇ ಆರೋಪಿ ಬೋಳಿಮಗನೇ, ಸೂಳೇಮಗನೇ ನೀನು ಯಾವನ್ ಕೇಳಕ್ಕೆ ಅಂತಾ ಬೈಯ್ದುನು. 1 ನೇ ಆರೋಪಿ ಕಲ್ಲಿನಿಂದ ಚಾಸಾ 1 ರವರ ತಲೆಯ ಮುಂಬಾಗಕ್ಷ ಹೊಡೆದನು. 2 ರಿಂದ 4 ನೇ ಆರೋಪಿತರು ಚಾಸಾ 1 ರವರ ಮೈಕೆಗೆ ಹೊಡೇದರು. ಆಗ ನಾನು ಬಿಡಿಸಲು ಹೋದೆ. 4 ನೇ ಆರೋಪಿ ಮೈಕೈಗೆ ಕೈಯಿಂದ ಹೊಡದನು. ಗಲಾಟೆ ಯನ್ನು ಚಾಸಾ 5 ರಿಂದ 8 ರವರು ಬಿಡಿಸಿರುತ್ತಾರೆ. ಆರೋಪಿತರು ಚಾಸಾ 1 ಮತ್ತು ನನಗೆ ಪ್ರಾಣ ತೆಗೆಯುವುದಾಗಿ ಬೆದರಿಕೆ ಹಾಕಿದರು. ನ್ಯಾಯಾಲಯದ ಮುಂದಿರುವ ಆರೋಪಿತರೇ ನನ್ನ ಹಾಗೂ ಚಾಸಾ 1 ರವರ ಮೇಲೆ ಹಲ್ಲೆ ಮಾಡಿದ ವ್ಯಕ್ತಿಗಳಾಗಿರುತ್ತಾರೆ.

ಗಲಾಟೆಯಾದ ಮಾರನೇಯ ದಿನ ಪೊಲೀಸರು ಸ್ಥಳಕ್ಕೆ ಬಂದು ಮಹಜರ್ ಮಾಡಿದ್ದು , ಸ್ಥಳವನ್ನು ಚಾಸಾ 3 ವುತ್ತು 4 ರವರು ತೋರಿಸಿರುತ್ತಾರೆ. ಸ್ಥಳದಿಂದ ಪೊಲೀಸನ ವರು ಮಹಜರ್ ಜರುಗಿಸಿ, ಕಲ್ಲನ್ನು ಅಮಾನತ್ತು ಪಡಿಸಿಕೊಂಡರು ಅದನ್ನು ಚಾಸಾ 3 ಮತ್ತು 4 ರವರು ಪೊಲೀಸರವರ ಸಮಕ್ಷಮ ಹಾಜರುಪಡಿಸಿದರು. ಮಹಜರನ್ನು ಬೆಳಿಗ್ಗೆ 10 ರಿಂದ 11 ಗಂಟೆಯವರೆಗೂ ಜರುಗಿಸಲಾಯಿತು. ಸಾಕ್ಷಿಗೆ ಮಹಜರ್ ನ್ನು ತೋರಿಸಿದ್ದು, ಸಾಕ್ಷಿ ಸಹಿಯನ್ನು ನೋಡಿ ಗುರುತಿಸಿದ್ದು, ಮಹಜರ್ ನ್ನು ನಿಪಿ-2 ಎಂದು ಸಾಕ್ಷಿಯ ಸಹಿಯನ್ನು ನಿಪಿ-2 (ಎ) ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದಿರುವ ಮು. ಮಾ 1 ರಿಂದಲೇ 1 ನೇ ಆರೋಪಿ ಚಾಸಾ

1 ರವರ  ಮೇಲೆ ಹಲ್ಲೆ ಮಾಡಿರುತ್ತಾನೆ.

**ಪಾಟೀಸವಾಲು ಆರೋಪಿ 1 ರಿಂದ 4 ರವರು ಪಾಟೀಸವಾಲಿಗಾಗಿ, ಸಮಯವನ್ನು ಕೋರಿದ್ದು, ಆಲಿಸಿ  ಅನುಮತಿಸಲಾಯಿತು.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸರಿ ಇದೆ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,
ಹುಣಸೂರು